ಈ) ಅದೇ ಮಂಡಳಿ ವತಿಯಿಂದ ಆರ್.ಐ.ಡಿ.ಎಫ್-6 ಹಾಗೂ ಆರ್.ಐ.ಡಿ.ಎಫ್-7ರಲ್ಲಿ ಕ್ರಮವಾಗಿ ಬಿ.ಎಂ. ರಸ್ತೆ-ಬೆಳತೂರು-ಕೆ.ಎನ್.ಎಂ ರಸ್ತೆ ಹಾಗೂ ಹೆಚ್.ಹೆಚ್.ಎ.ಪಿ.ಕೆ.ಕೆ ರಸ್ತೆ-ಬಾರ್ಸೆ- ಕುಡಕೂರು-ಎನ್.ಶೆಟ್ಟಿಹಳ್ಳಿ ವರೆಗಿನ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಆಡಳಿತಾತ್ಮಕ ಮಂಜೂರಾತಿನೀಡಿದ್ದರೂ ಕಾಮಗಾರಿಯನ್ನು ಇದುವರೆವಿಗೂ ಪ್ರಾರಂಭಿಸದಿರಲು ಕಾರಣಗಳೇನು?

ಉ) ಈ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಊ) ಈ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಎಷ್ಟು?

ಋ) ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಎಂ.ಎ.ಡಿ.ಬಿ. ಸಚಿವರು):

ಅ) ಬಂದಿದೆ.

ಆ) ಈ ಕಾಮಗಾರಿಯ ವಿನ್ಯಾಸ ಬದಲಾದುದರಿಂದ ಮಂಡಳಿಯ ಪರಿಷ್ಕೃತ ಅಂದಾಜನ್ನು ಕಳುಹಿಸಿದ್ದು, ಇದು ಪರಿಶೀಲನೆಯಲ್ಲಿದೆ.

ಇ) ಸಂಪನ್ಮೂಲಗಳನ್ನಾಧರಿಸಿ ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಈ) ಬಿ.ಎಂ. ರಸ್ತೆ-ಬೆಳತೂರು-ಕೆ.ಎನ್.ಎಂ ರಸ್ತೆ ಬದಲಿಗೆ ಮೈಸೂರು-ಬಂಟವಾಳ-ಮುತ್ತೂರು ರಸ್ತೆ ತೆಗೆದುಕೊಳ್ಳಲು ಬದಲಿ ಪ್ರಸ್ತಾವನೆಯು ಬಂದಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಸಂಪನ್ಮೂಲಗಳನ್ನಾಧರಿಸಿ ಹೆಚ್.ಹೆಚ್. ಎ.ಪಿ.ಕೆ.ಕೆ ರಸ್ತೆ-ಬಾರ್ಸೆ-ಕುಡಕೂರು-ಎನ್.ಶೆಟ್ಟಿಹಳ್ಳಿ ರಸ್ತೆಯನ್ನು ತೆಗೆದುಕೊಳ್ಳಲು ಕ್ರಮ ಜರುಗಿಸಲಾಗುವುದು.

ಉ) ಮೇಲೆ ವಿವರಿಸಿದಂತೆ.

ಊ) ಕಾಮಗಾರಿಗಳ ಅಂದಾಜು ಮೊತ್ತ ಈ ಕೆಳಕಂಡಂತಿದೆ.

ಬಿ.ಎಂ. ರಸ್ತೆ-ಬೆಳತೂರು- ರೂ. 20 ಲಕ್ಷ

ಕೆ.ಎನ್.ಎಂ. ರಸ್ತೆ

ಹೆಚ್.ಹೆಚ್.ಎ.ಪಿ.ಕೆ.ಕೆ- ರೂ. 30 ಲಕ್ಷ

ಕುಡಕೂರು ರಸ್ತೆ

ಋ) ಸಂಪನ್ಮೂಲಗಳನ್ನಾಧರಿಸಿ, ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

## ಮುಳವಾಡ ಏತ ನೀರಾವರಿಗೆ ಸ್ವಾಧೀನಪಡಿಸಿರುವ ರೈತರ ಬೇಡಿಕೆಗಳಿಗನುಗುಣವಾಗಿ ಹಣ ನೀಡುವುದು

1199(1819) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಮುಳವಾಡ ಏತನೀರಾವರಿ"ಎ" ಸ್ಕೀಮಿನ ಕಾಲುವೆಗೆ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ರೈತರ ಬೇಡಿಕೆಯ (ಒಣ ಬೇಸಾಯ ಪ್ರತಿ ಎಕರೆಗೆ ರೂ. 1.00 ಲಕ್ಷ ನೀರಾವರಿ ಪ್ರತಿ ಎಕರೆಗೆ ರೂ. 2.00 ಲಕ್ಷ) ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

2. ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

1. ಒಪ್ಪಿಗೆ ಐತೀರ್ಪು ದರಗಳಿಗೆ ಸರ್ಕಾರವು ದರ ನಿಗಧಿ ಮಾಡುವಲ್ಲಿ ಸಲಹಾ ಸಮಿತಿ ನೇಮಿಸಿದ್ದು, ಸಮಿತಿಯ ಶಿಫಾರಸ್ಸು ಪ್ರಕಾರ ಸರ್ಕಾರವು ದರಗಳನ್ನು ನಿಗಧಿಪಡಿಸಿರುವುದರಿಂದ ಇದರ ಬಗ್ಗೆ ಯಾವುದೇ ಕ್ರಮದ ಅವಶ್ಯಕತೆ ಇರುವುದಿಲ್ಲ.

2. ಸಲಹಾ ಸಮಿತಿಯ ನಿರ್ಣಯದಂತೆ ಬೆಲೆ ನಿಗಧಿಪಡಿಸುವುದರಿಂದ, ಈ ಹಂತದಲ್ಲಿ ಪರಿಷ್ಕರಿಸುವ ಅವಶ್ಯಕತೆ ಇರುವುದಿಲ್ಲ.

## ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟಿ ಇತ್ಯಾದಿಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡುವ ಬಗ್ಗೆ

1200(1820) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟೆ, ಚಡಚಣ, ಕಲಕೇರಿ, ಬಬಲೇಶ್ವರ, ದೇವರಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ತಾಲ್ಲೂಕು ರಚನೆ ಮಾಡದೇ ಇದ್ದಲ್ಲಿ, ಸದರಿ ನಾಡ ಕಛೇರಿಗಳಿಗೆ ವಿಶೇಷ ತಹಸೀಲ್ದಾರ್‌ರುಗಳನ್ನು ನೇಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

ಅ) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವಶ್ಯಕತೆ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲಿಸಿರುತ್ತವೆ. ಹೊಸ ತಾಲ್ಲೂಕುಗಳನ್ನು ಸೃಜಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಆದರೆ ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸುವ ದೃಷ್ಟಿಯಿಂದ ಬಿಜಾಪುರ ಜಿಲ್ಲೆಯ ನಿಡಗುಂದಿ, ತಾಳಿಕೋಟೆ, ಬಬಲೇಶ್ವರಗಳಿಗೆ ಒಂದೊಂದು ವಿಶೇಷ ತಹಸೀಲ್ದಾರರನ್ನು ನೇಮಿಸಲಾಗಿದೆ. ಅಲ್ಲದೆ, ಜಡಚಣಕ್ಕೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕೊಲಹಾರ, ಕಲಕೇರಿಹಾಗೂ ದೇವರ ಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಸೃಜಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ನಾಡಕಛೇರಿಗಳಿಗೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

## ಬಿಜಾಪುರ ಜಿಲ್ಲೆಗೆ ಬರಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾದ ಹಣ ಮತ್ತು ಆಹಾರ ಧಾನ್ಯಗಳು

1201(1821) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಹಣ ಮತ್ತು ಆಹಾರಧಾನ್ಯಗಳು ಎಷ್ಟು?

ಆ) ಇದರಲ್ಲಿ ರಾಜ್ಯ ಸರ್ಕಾರ ಎಷ್ಟು ಎತ್ತುವಳಿ ಮಾಡಿದೆ?